**<u>ಸಾಕ್ಷಿಯನ್ನು ದಿಃ 07.04.2026 ರಂದು ಕರೆಸಿ ಪ್ರಮಾಣವಚನ ಭೋದಿಸಲಾಯಿತು.</u>**

**<u>ಮುಖ್ಯ ವಿಚಾರಣೆಃ 2 ನೇ ಪ್ರತಿವಾದಿ ಪರ ವಕೀಲರಿಂದ</u>**

ನಾನು ಈ ದಾವೆಯಲ್ಲಿ 2 ನೇ ಪ್ರತಿವಾದಿಯಾಗಿದ್ದು, ನನ್ನ ಮುಖ್ಯ ವಿಚಾರಣೆಯ ಹೇಳಿಕೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿದ್ದೇನೆ. ಅದರಲ್ಲಿ ಬರೆದಿರುವ ವಿಷಯಗಳು ನನಗೆ ತಿಳಿದಿದೆ, ಸತ್ಯವಾಗಿದೆ ಮತ್ತು ಸಹಿ ನನ್ನದೆ ಆಗಿದೆ.

**ಈ ಕೆಳಕಂಡ ದಾಖಲೆಗಳನ್ನು ಹಾಜರು ಪಡಿಸಿರುತ್ತೇನೆ.**

| | |
|---|---|
| ನಿಡಿ.1 ರಿಂದ 3 | ಸರ್ವೆ ನಂ. 47/18, 54 ಮತ್ತು 9 ರ 3 ಆರ್.ಟಿ.ಸಿ ಗಳು |
| ನಿಡಿ.4 | ಸರ್ವೆ ನಂ. 47/18 ಕ್ಕೆ ಸಂಬಂಧಿಸಿದ ಎಂ.ಆರ್ ಹೆಚ್. 8/2017-18 ರ ಮ್ಯೂಟೇಶನ್ ರಿಜಿಸ್ಟರ್ ನ ದೃಡೀಕೃತ ಪ್ರತಿ |
| ನಿಡಿ.5 | ಎಂ.ಆರ್ ಹೆಚ್. 1/2012-13 ನ ಮ್ಯೂಟೇಶನ್ ರಿಜಿಸ್ಟರ್ ನ ದೃಡೀಕೃತ ಪ್ರತಿ |
| ನಿಡಿ.6 | ಅಹವಾಲು ತಕ್ತೆಯ ದೃಡೀಕೃತ ಪ್ರತಿ |
| ನಿಡಿ.7 | ದುರಸ್ತು ಅರ್ಜಿಯ ದೃಡೀಕೃತ ಪ್ರತಿ |
| ನಿಡಿ.8 | ದಿಃ 16.12.2024 ರಂದು ತಹಸೀಲ್ದಾರರು ನೀಡಿದ ಹಿಂಬರಹ |
| ನಿಡಿ.9 | ಎಲ್.ಎನ್.ಡಿ ಸಲ್ಲಿಸಿದ ಬಗ್ಗೆ ಚಲನ್ ನ ದೃಡೀಕೃತ ಪ್ರತಿ |
| ನಿಡಿ.10 | ದಾವಾ ಸ್ವತ್ತಿಗೆ ಸಂಬಂಧಿಸಿದ ಫಾರ್ಮ್ ನಂ. 5 ರ ದೃಡೀಕೃತ ಪ್ರತಿ |
| ನಿಡಿ.11 | ಕಾಳಮ್ಮ ಎಂಬುವವರಿಗೆ ಗ್ರ್ಯಾಂಟ್ ಮಂಜೂರಾತಿಯ ದೃಡೀಕೃತ ಪ್ರತಿ |
| ನಿಡಿ.12 ರಿಂದ 14 | ಟಿಪ್ಪಣಿಯ ದೃಡೀಕೃತ ಪ್ರತಿಯೊಂದಿಗೆ 2 ದೃಡೀಕೃತ ಸ್ಕೆಚ್ ಗಳು |
| ನಿಡಿ.15 | ದಾವಾ ಸ್ವತ್ತಿಗೆ ಸಂಬಂಧಿಸಿದ ತಪಶೀಲಿನ ದೃಡೀಕೃತ ಪ್ರತಿ |
| ನಿಡಿ.16 | ದಾವಾ ಸ್ವತ್ತಿಗೆ ಸಂಬಂಧಿಸಿದ ನಮೂನೆ 5 ದೃಡೀಕೃತ ಪ್ರತಿ |
| ನಿಡಿ.17 ಮತ್ತು 18 | ಸರ್ವೆ ನಂ. 47 ಕ್ಕೆ ಸನಬಧಿಸಿದ ಸರ್ವೆ ಟಿಪ್ಪಣಿ ಮತ್ತು ಆಕಾರ್ ಬಂದ್ ನ ದೃಡೀಕೃತ ಪ್ರತಿ |

| | |
|---|---|
| ನಿಡಿ.19 | ರೀ ಟಿಪ್ಪಣಿ ಪುಸ್ತಕದ ದೃಡೀಕೃತ ಪ್ರತಿ |
| ನಿಡಿ.20 | ಸರ್ವೆ ನಂ. 47 / 18 ಕ್ಕೆ ಸಂಬಂಧಿಸಿದಂತೆ 1 ಕಂಪ್ಯೂಟರೈಜ್ಡ್ ಆರ್.ಟಿ.ಸಿ |
| ನಿಡಿ.21 **ರಿಂದ** 25 | ಸರ್ವೆ ನಂ. 47 / 18 ಕ್ಕೆ ಸಂಬಂಧಿಸಿದ 5 ಕೈ ಬಹರದ ಆರ್.ಟಿ.ಸಿಗಳು |
| ನಿಡಿ.26 | ಕಂದಾಯ ರಶೀದಿ |
| ನಿಡಿ.27 **ರಿಂದ** 35 | ಸರ್ವೆ ನಂ. 47 / 18 ಕ್ಕೆ ಸಂಬಂಧಿಸಿದ 9 ಕಂಪ್ಯೂಟರೈಜ್ಡ್ ಆರ್.ಟಿ.ಸಿಗಳು |
| ನಿಡಿ.36 | ಎಂ.ಆರ್. ಹೆಚ್. ನಂ. 8/2017-18 ರ ಮ್ಯೂಟೇಶನ್ ರಿಜಿಸ್ಟರ್ ಪ್ರತಿ |
| ನಿಡಿ.37 **ರಿಂದ** 44 | ದಾವಾ ಸ್ವತ್ತಿನಲ್ಲಿ ಉಳುಮೆ ಮಾಡುವುದನ್ನು ತೋರಿಸಿಸುವುದಕ್ಕೆ 7 ಪೋಟೋಗಳು ಮತ್ತು ಸಿಡಿ |
| ನಿಡಿ.45 **ಮತ್ತು** 46 | ದಿಃ 06.09.2024 ದ ವಿಜಯ ಕರ್ನಾಟಕ ಮತ್ತು ದಿಃ 05.04.2025 ರ ಪ್ರಜಾ ವಾಣಿಯ ದಿನ ಪತ್ರಿಕೆಗಳು |

**ಮುಂದುವರೆದ ಮುಖ್ಯ ವಿಚಾರಣೆಗೆ ವಕೀಲರು ಕಾಲಾವಕಾಶ ಕೋರಿದ್ದು, ಮುಂದೂಡಲಾಯಿತು.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

ಓ ಹೇ ಕೇ ಸ ಇದೆ.,

(ಭಾಗ್ಯಮ್ಮ)
1 ನೇ ಹೆಚ್ಚುವರಿ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ.,ಹುಣಸೂರು.